

# ಮೊಣಕಾಲಿಗೆ ನೋವುರಹಿತ ಸರ್ಜರಿ

ಮಂಡಿನೋವಿನಿಂದ ಹಿಂಸೆ ಅನುಭವಿಸುವವರಿಗೆ ಸಿಹಿಸುದ್ದಿ. ಮೊಣಕಾಲಿನ ಸರ್ಜರಿ ಮಾಡಿಸಿಕೊಳ್ಳುವಾಗ ಇನ್ನು ಮುಂದೆ ನೋವು ಅನುಭವಿಸುವ ಅಗತ್ಯವಿಲ್ಲ. ಕಿಂಚಿತ್ತೂ ನೋವಿನ ಅನುಭವ ಆಗದೆ 'ನೋವು ರಹಿತ ಸರ್ಜರಿ' ವೈದ್ಯಲೋಕದ ಹೊಸ ಆವಿಷ್ಕಾರ. ವಿದೇಶಗಳಲ್ಲಿ ಜನಪ್ರಿಯವಾಗಿರುವ ಈ ಸರ್ಜರಿ ಇದೀಗ ಬೆಂಗಳೂರಿನಲ್ಲೂ ಲಭ್ಯ.

■ ಉಮಾ ವೇಣೂರು

ರಾಯಚೂರಿನ ಸೂಗಮ್ಮನಿಗೆ 60 ವರ್ಷ. ಮೊಣಕಾಲು ನೋವಿನಿಂದ ಬಳಲುತ್ತಿದ್ದ ಸೂಗಮ್ಮ ಅವರಿಗೆ ಇದರ ನಿವಾರಣೆಗೆ ಶಸ್ತ್ರಚಿಕಿತ್ಸೆಯೊಂದೇ ದಾರಿ ಎಂದು ವೈದ್ಯರು ತಿಳಿಸಿದಾಗ ಅಕ್ಷರಶಃ ಕಂಗೆಟ್ಟು ಹೋದರು. ಮೊಣಕಾಲು ನೋವಿಗೆ ಮಾಡುವ ಸರ್ಜರಿ ಈಗ ಮೊದಲಿನಂತೆ ಅಲ್ಲ; ಸ್ವಲ್ಪವೂ ನೋವಿನ ಅನುಭವ ಆಗದಂತೆ ಹಾಗೂ ಸರ್ಜರಿ ಆದ ದಿನವೇ ವಾರ್ಡ್‌ಗೆ ಬಂದು ಸಾಮಾನ್ಯ ರೋಗಿಯಂತೆ ಇರಬಹುದು ಎಂದು ತಿಳಿದ ಮೇಲೆ ಅವರು ಬೆಂಗಳೂರಿಗೆ ಬಂದರು. ಸ್ಪರ್ಶ ಆಸ್ಪತ್ರೆಯಲ್ಲಿ 'ನೋವಿಲ್ಲದ ಸರ್ಜರಿ' ಮಾಡಿಸಿಕೊಂಡ ಸೂಗಮ್ಮ ಒಂದೇ ದಿನಕ್ಕೆ ಗೆಲುವಾದರು. ಶಸ್ತ್ರಚಿಕಿತ್ಸಾ ಕೊಠಡಿಗೆ ಸಹಾಯಕರ ನೆರವಿನಿಂದ ಹೋದ ಇವರು ಸರ್ಜರಿ ಬಳಿಕ ನಡೆದುಕೊಂಡೇ ವಾರ್ಡ್‌ಗೆ ಬಂದರು. ಈಗ ಸೂಗಮ್ಮ ಮೊದಲಿನಂತೆ ಆರಾಮವಾಗಿ ಓಡಾಡುವಂತಾಗಿದೆ.

***

ಕೇರಳದಿಂದ ಬಂದ ವಿಜಯಕುಮಾರ್‌ಗೆ 62 ವರ್ಷ. ಕೃಷಿಗ್ರಾಮೀಣಾಭಿವೃದ್ಧಿ ಬ್ಯಾಂಕ್‌ನಲ್ಲಿ ವ್ಯವಸ್ಥಾಪಕರಾಗಿದ್ದ ಇವರಿಗೆ 10 ವರ್ಷ ಹಿಂದಿನಿಂದಲೂ ಮೊಣಕಾಲಿನಲ್ಲಿ ವಿಪರೀತ ನೋವು ಬರುತ್ತಿತ್ತು. ಸ್ಥಳೀಯವಾಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದರೂ ಏನೂ ಪ್ರಯೋಜನವಾಗಲಿಲ್ಲ. ಕೊನೆಗೆ ಪರಿಚಿತರೊಬ್ಬರ ಶಿಫಾರಸ್ಸಿನ ಮೇರೆಗೆ ವಿಜಯಕುಮಾರ್ ಬೆಂಗಳೂರಿನ ಸ್ಪರ್ಶ ಆಸ್ಪತ್ರೆಗೆ ಬಂದು ವೈದ್ಯರ ಬಳಿ ತಪಾಸಣೆಗೊಳಪಡಿಸಿದಾಗ 'ಮಂಡಿ ಚಿಪ್ಪು ಬದಲಾವಣೆ' ಅನಿವಾರ್ಯ ಎಂಬ ತೀರ್ಮಾನಕ್ಕೆ ಬರಲಾಯಿತು. ನುರಿತ ವೈದ್ಯರ ತಂಡ

ಮೊಣಕಾಲಿಗೆ ನೋವುರಹಿತ ಸರ್ಜರಿ ಮಾಡಿಸಿಕೊಂಡ ಕೇರಳದ ವಿಜಯಕುಮಾರ್